ಆಹ್ವಾನಿಸಿ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಪ್ರಾರಂಭವಾಗುತ್ತದೆ ಸಿ ಇ ಟಿ ಪರೀಕ್ಷೆ ನಡೆದು ಫಲಿತಾಂಶ ಘೋಷಣೆ ಆಗುವವರೆಗೆ ಪರೀಕ್ಷಾ ಪೂರ್ವಕೆಲಸ ಎಂದು ಪರಿಗಣಿಸಿದ್ದು ಸೀಟು ಆಯ್ಕೆ ಅವಧಿಯನ್ನು ಪರೀಕ್ಷಾ ನಂತರದ ಅವಧಿ ಎಂದು ಪರಿಗಣಿಸಲಾಗಿದೆ ಪ್ರಸ್ತುತ ಸಾಲಿನಲ್ಲಿ ಸಿ ಇ ಟಿ ಪರೀಕ್ಷಾ ಪೂರ್ವ ಅವಧಿ ಹಾಗು ಪರೀಕ್ಷಾ ನಂತರದ ಅವಧಿ ದಿನಾಂಕ 28–01–2007 ರಿಂದ ಪ್ರಾರಂಭವಾಗಿ ದಿನಾಂಕ 03–08–2007 ಕ್ಕೆ ಮುಕ್ತಾಯವಾಗುತ್ತದೆ ಇದರಿಂದಾಗಿ ವರ್ಷವಿಡಿ ಹೆಚ್ಚಿನ ಕೆಲಸ ಒತ್ತಡವಿರುವುದಿಲ್ಲ

ಸಿ ಇ ಟಿ ಘಟಕಕ್ಕೆ ಮಂಜೂರಾದ ಹುದ್ದೆಗಳನ್ನು ನಿಯೋಜನ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು ಆದರೆ ಎಲ್ಲಾ ಹುದ್ದೆಗಳಿಗೆ ನಿಯೋಜನೆ ಆಧಾರದ ಮೇಲೆ ಸಿಬ್ಬಂದಿಗಳು ಲಭ್ಯವಾಗದ ಕಾರಣ ಒಪ್ಪಂದದ ಆಧಾರದ ಮೇಲೆ ನೇಮಕ ಮಾಡಿಕೊಂಡು ಮುಂದುವರೆಸಿಕೊಂಡು ಬರಲಾಗುತ್ತಿದೆ ಸಿ ಇ ಟಿ ಘಟಕಕ್ಕೆ ಹುದ್ದೆಗಳನ್ನು ಮಂಜೂರು ಮಾಡಲಾದ ನಿಯಮಗಳನ್ವಯ ನಿಯೋಜನೆ ಆಧಾರದ ಮೇಲೆಯೇ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿರುವುದರಿಂದ ಒಪ್ಪಂದ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಯಂಗೊಳಿಸಲು ಅವಕಾಶ ಇರುವುದಿಲ್ಲ

1643 (1905) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳೆಷ್ಟು ಹಾಗೂ ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರೆಷ್ಟು,

ಆ) ಇವುಗಳ ಪೈಕಿ ಎಷ್ಟು ಶಾಲೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರುವುದಿಲ್ಲ,

ಇ) ಹಲವಾರು ಸರ್ಕಾರಿ ಶಾಲೆಗಳಲ್ಲಿ ಕೇವಲ ಉಪಾಧ್ಯಾಯರುಗಳು ಶೌಚಾಲಯವನ್ನು ಉಪಯೋಗಿಸಿಕೊಂಡು ಶಾಲಾ ಮಕ್ಕಳಿಗೆ ಶೌಚಾಲಯದ ವ್ಯವಸ್ಥೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಇತ್ತೀಚೆಗೆ ಇಬ್ಬರು ಶಾಲಾ ಮಕ್ಕಳು ಶೌಚಾಲಯದ ಸಮಸ್ಯೆಯಿಂದ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯದ ವ್ಯವಸ್ಥೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 43133 ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಒಟ್ಟು 5491400

ಆ) ಸಾಮಾನ್ಯ ಶೌಚಾಲಯ ಇಲ್ಲದಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು 13440 ಪ್ರತ್ಯೇಕ ಹೆಣ್ಣು ಮಕ್ಕಳ ಶೌಚಾಲಯ ಇಲ್ಲದಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು 29326

ಇ) ಬಂದಿದೆ

ಈ) ಗ್ರಾಮೀಣ ಭಾಗದ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣದ ಜವಾಬ್ದಾರಿಯನ್ನು ಸಂಪೂರ್ಣ ಸ್ವಚ್ಛತಾ ಆಂದೋಲನಾ ಕಾರ್ಯಕ್ರಮದಡಿ ಗ್ರಾಮೀಣ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಪೂರೈಸುತ್ತದೆ ಸದರಿ ಯೋಜನೆಯಲ್ಲಿ ಎಲ್ಲಾ ಭಾಗದ ಶಾಲಾ ಶೌಚಾಲಯ ನಿರ್ಮಾಣವನ್ನು ಮಾರ್ಚ್–07 ರ ಒಳಗೆ ಪೂರ್ಣಗೊಳಿಸುವ ಗುರಿ ಇದೆ ನಗರ ಪ್ರದೇಶದ ಶೌಚಾಲಯ ಮತ್ತು ನೀರಿನ ವ್ಯವಸ್ಥೆಗೆ ರೂ 860 00 ಲಕ್ಷಗಳನ್ನು 2007–08 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿಕೊಂಡಿದೆ

1644 (2093) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ವರ್ಷದಲ್ಲಿ ಸರ್ಕಾರ ವಿವಿಧ ಯೋಜನೆಗಳಲ್ಲಿ ವಸತಿ ನಿರ್ಮಾಣಕ್ಕಾಗಿ ನಿಗದಿಪಡಿಸಿದ್ದ ಗುರಿ ಎಷ್ಟು (ಭೌತಿಕ ಹಾಗೂ ಆರ್ಥಿಕ ವಿವರ ಒದಗಿಸುವುದು),

ಆ) ಕಳೆದ ತಿಂಗಳ ಅಂತ್ಯದವರೆಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ,

ಇ) ವಿವಿಧ ಯೋಜನೆಗಳಡಿ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳೇನು?